

بِسۡمِ اللّٰہِ الرَّحۡمٰنِ الرَّحِیۡمِ

# ಮಾರ್ಚ್ 23 : ಯೌಮೆ ಮಸೀಹ್ ಮೌಊದ್

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **24-03-2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ನಿನ್ನೆ ಮಾರ್ಚ್ ದಿನಾಂಕ 23 ಅಹ್ಮದಿಯಾ ಜಮಾಅತಿನ ಚರಿತ್ರೆಯಲ್ಲಿ ಬಹಳ ಮಹತ್ವಪೂರ್ಣ ದಿನವಾಗಿದೆ. ಏಕೆಂದರೆ ಆ ದಿನಾಂಕದಂದು ಬೈಅತ್ ಮೂಲಕ ಅಹ್ಮದಿಯಾ ಜಮಾಅತಿಗೆ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರು ಅಸ್ತಿಭಾರ ಹಾಕಿದರು. ಆಗಮಿಸಲಿರುವ ಯಾವ ವಾಗ್ದತ್ತ ಮಸೀಹ್ ಮಹ್‌ದಿಯ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಂಚಿತವಾಗಿ ತಿಳಿಸಿದ್ದರೋ ಆ ಮಹ್‌ದೀ ಮಸೀಹ್ ನಾನೇ ಎಂದು ಅವರು ವಾದಿಸಿದರು. ಜನರ ಹೃದಯಗಳಲ್ಲಿ ಅಲ್ಲಾಹನ ಏಕತ್ವ ಮತ್ತು ಅಲ್ಲಾಹನ ಬಗ್ಗೆ ಪ್ರೀತಿಯನ್ನು ಸೃಷ್ಟಿಸಲು ನಾನು ಕಳುಹಿಸಲ್ಪಟ್ಟಿರುವೆನು ಎಂದು ಅವರು ಹೇಳಿದರು. ಲೋಕದ ವಿವಿಧ ಭಾಗಗಳಲ್ಲಿ ವಾಸಿಸುವ, ಏಶಿಯಾ ಮತ್ತು ಯುರೋಪುಗಳಲ್ಲಿ ವಾಸಿಸುವ, ಉತ್ತಮ ಪ್ರಕೃತಿ ಹೊಂದಿದ ಜನರನ್ನು ಏಕದೇವ ವಿಶ್ವಾಸದ ಕಡೆಗೆ ಎಳೆದುಕೊಳ್ಳಲು ಮತ್ತು ಅವರನ್ನು ಏಕಧರ್ಮದಲ್ಲಿ ಜಮಾಯಿಸಲು ಅಲ್ಲಾಹನು ಇಚ್ಛಿಸುತ್ತಾನೆ. ಅಲ್ಲಾಹನ ಉದ್ದೇಶಲಕ್ಷ್ಯ ಇದೇ ಆಗಿದೆ. ಅದಕ್ಕೋಸ್ಕರ ನಾನು ಕಳುಹಿಸಲ್ಪಟ್ಟಿದ್ದೇನೆ. ಆದುದರಿಂದ ನೀವು ಈ ಉದ್ದೇಶಲಕ್ಷ್ಯವನ್ನು ಈಡೇರಿಸಲು ಕಾರ್ಯಪ್ರವೃತ್ತರಾಗಿರಿ. ಆದರೆ ಮೃದುತ್ವ, ಸುಸ್ವಭಾವ ಮತ್ತು ಪ್ರಾರ್ಥನೆಗಳ ಕಡೆಗೆ ಒತ್ತು ನೀಡುವ ಮೂಲಕ ಈ ಕಾರ್ಯ ಸಾಧಿಸಬೇಕು ಎಂದು ಅವರು ಹೇಳಿದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನನಗೆ ಈ ಪದವಿ ಮತ್ತು ಸ್ಥಾನ ಲಭಿಸಿದುದು ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸಿ ಅವರನ್ನು ಸತ್ಯಸಂಧವಾಗಿ ಪ್ರೀತಿಸಿದ ಕಾರಣದಿಂದಾಗಿದೆ. ಆದುದರಿಂದ ಸಮಸ್ತ ಲೋಕಕ್ಕೆ ನಾನು ನೀಡುವ ಸಂದೇಶ ಆ ಸಂದೇಶವಾಹಕರನ್ನು ಪ್ರೀತಿಸಿರಿ ಮತ್ತು ಅವರನ್ನು ಅನುಸರಿಸಿರಿ ಎಂದಾಗಿದೆ. ಆ ಮೂಲಕ ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿತವಾಗುವುದು ಮತ್ತು ನೈಜ ಏಕದೇವ ವಿಶ್ವಾಸಿಯಾಗಲು ಸಾಧ್ಯ.

ಸಮಸ್ತ ಆದಂ ಸಂತತಿಗಳಿಗೆ ಈಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೊರತು ಬೇರೆ ಯಾವ ಶಫೀಅ್ (ಶಿಫಾರಸುಗಾರನೂ) ಇಲ್ಲ. ಆದುದರಿಂದ ಈ ವೈಭವಶಾಲಿ ಪ್ರವಾದಿಯೊಂದಿಗೆ ಸತ್ಯವಾದ ಪ್ರೀತಿ ಹೊಂದಿರಿ. ಬೇರೆ ಯಾರಿಗೂ ಅವರಿಗಿಂತ ಯಾವ ರೀತಿಯ ಉನ್ನತ ಸ್ಥಾನವನ್ನೂ ನೀಡಬೇಡಿರಿ. ಹಾಗಿದ್ದರೆ ಮಾತ್ರ ನೀವು ಆಕಾಶದಲ್ಲಿ ಮೋಕ್ಷಗಳಿಸಿದವರೆಂದು ಬರೆಯಲ್ಪಡುವಿರಿ. ನೆನಪಿಡಿರಿ, ಮೋಕ್ಷ ಎಂದರೆ ಮೃತನಾದ ನಂತರ ದೊರಕುವ ವಸ್ತುವಲ್ಲ. ವಾಸ್ತವಿಕ ಮೋಕ್ಷ ಇಹಲೋಕದಲ್ಲಿ ತನ್ನ ಪ್ರಕಾಶವನ್ನು ತೋರಿಸುತ್ತದೆ. ಮೋಕ್ಷ ಗಳಿಸಿದವರು ಯಾರು? ಅಲ್ಲಾಹನ ಅಸ್ತಿತ್ವ ಸತ್ಯವಾದುದೆಂದು ದೃಢವಾಗಿ ನಂಬಿ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಲ್ಲಾ ಮನುಷ್ಯರ ಪರವಾಗಿ ಶಿಫಾರಸುಗಾರರು ಎಂದು ದೃಢವಾಗಿ ನಂಬುವವರು. ಆಕಾಶದ ಕೆಳಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಮಾನವಾದ ಪದವಿ ಗಳಿಸಿದ ಯಾವ ಸಂದೇಶವಾಹಕನೂ ಇಲ್ಲ. ಪವಿತ್ರ ಖುರ್‌ಆನಿಗೆ ಸಮಾನವಾದ ಪದವಿ ಹೊಂದಿದ ಬೇರೆ ಯಾವುದೇ ಗ್ರಂಥವೂ ಇಲ್ಲ. ಯಾರಾದರೂ ಶಾಶ್ವತವಾಗಿ ಜೀವಿಸಿರಬೇಕೆಂದು ಅಲ್ಲಾಹನು ಇಚ್ಛಿಸಿಲ್ಲ. ಆದರೆ ಈ ವೈಭವಶಾಲಿ ಪ್ರವಾದಿ ಶಾಶ್ವತವಾಗಿ ಜೀವಂತವಾಗಿರುವವರು ಆಗಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಪ್ರಕಟಿಸಿದ ಆದರಭಾವನೆ ಆ ರೀತಿಯಲ್ಲಿತ್ತು. ಅವರು ಯಾವಾಗಲೂ ಧಾರಾಳವಾಗಿ ಈ ರೀತಿ ತನ್ನ ಆದರವನ್ನು ಪ್ರಕಟಿಸುತ್ತಿದ್ದರಲ್ಲದೆ ಅವರು ತನ್ನನ್ನು ನಂಬುವವರೊಂದಿಗೆ ಅದರ ಬಗ್ಗೆ ಒತ್ತಿ ಹೇಳಿದರು- ಅವರೆಲ್ಲರೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಪ್ರೀತಿ ಮತ್ತು ಗೌರವವನ್ನು ಹೊಂದಬೇಕೆಂದು. ಅಹ್ಮದಿಯರು (ನಊದುಬಿಲ್ಲಾಹ್) ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಉನ್ನತಸ್ಥಾನ ನೀಡಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನವನ್ನು ತಗ್ಗಿಸುತ್ತಾರೆ ಎಂದು ಆಕ್ಷೇಪಿಸುವವರು ನಿಜವಾಗಿಯೂ ಅಕ್ರಮಿಗಳಾಗಿದ್ದಾರೆ.

ಅಲ್‌ಜೀರಿಯಾದಲ್ಲಿ ಅಹ್ಮದಿಯರ ವಿರುದ್ಧ ಈ ದೋಷಾರೋಪ ಮಾಡಲಾಗುತ್ತದೆ. ಮತ್ತು ದೋಷಾರೋಪ ಹೊರಿಸಿ ಅಹ್ಮದಿಯರನ್ನು ಸೆರೆಮನೆಗೆ ತಳ್ಳುತ್ತಾರೆ. ಈಗ ಅವರು ಮಹಿಳೆಯರ ವಿರುದ್ಧ ಸಹ ಮೊಕದ್ದಮೆ ಹೂಡಲು ಪ್ರಾರಂಭಿಸಿದ್ದಾರೆ. ಆದರೆ ಆ ಮಹಿಳೆಯರು ನನಗೆ ಹೀಗೆ ಸಂದೇಶ ತಲಪಿಸುತ್ತಾರೆ. ಅವರು ಹೇಳುತ್ತಾರೆ, ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ್ದೇವೆ. ಅವರನ್ನು ನಂಬಿದ ನಂತರವೇ ನಮಗೆ ನೈಜ ತೌಹೀದ್ ಬಗ್ಗೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನ ಮತ್ತು ಪದವಿ ಬಗ್ಗೆ ಮತ್ತು ಅವರೊಂದಿಗೆ ಸತ್ಯವಾದ ಪ್ರೀತಿ ಹೊಂದುವ ಬಗ್ಗೆ ವಾಸ್ತವಿಕವಾಗಿ ತಿಳುವಳಿಕೆ ಲಭಿಸಿದೆ. ನಮಗಿರುವ ವಿಶ್ವಾಸದಿಂದ ಹಿಂದೆ ಸರಿಯಲು ನಮಗೆ ಹೇಗೆ ತಾನೆ ಸಾಧ್ಯ ಎಂದು ಅವರು ಬರೆಯುತ್ತಾರೆ. ಈ ಅಹ್ಮದಿಯರ

ಸಂಕಷ್ಟ ನಿವಾರಣೆಯಾಗಲು ನಾವು ಪ್ರಾರ್ಥಿಸುತ್ತೇವೆ. ಅದರೊಂದಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಪ್ರೇಮಿಯನ್ನು ನಂಬುವ ಭಾಗ್ಯ ಮುಸ್ಲಿಮರಿಗೆ ಅಲ್ಲಾಹನು ದಯಪಾಲಿಸಲಿ ಎಂದು ಸಹ ನಾವು ಪ್ರಾರ್ಥಿಸುತ್ತೇವೆ. ಅಲ್ಲಾಹನ ವಾಗ್ದಾನ ಪ್ರಕಾರ ತೌಹೀದನ್ನು ಸ್ಥಾಪಿಸಲು ಮತ್ತು ಇಸ್ಲಾಮನ್ನು ಪುನಶ್ಚೇತನಗೊಳಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಮಿಸಿದ್ದರು. ಅಲ್ಲಾಹನ ಬಗ್ಗೆ ಪ್ರೀತಿ ಮತ್ತು ತೌಹೀದನ್ನು ಸ್ಥಾಪಿಸಲು ಅವರಿಗಿದ್ದ ಬೇಗುದಿಯ ಒಂದು ನೋಟ ಅವರ ಈ ಕೆಳಗಿನ ಶಬ್ದಗಳಿಂದ ದೊರಕುತ್ತದೆ. ಅವರು ಅಲ್ಲಾಹನನ್ನು ಸಂಬೋಧಿಸಿ ಹೇಳುತ್ತಾರೆ: ಓ ಅಲ್ಲಾಹ್, ನೀನು ಕಾಣುತ್ತಿರುವೆ, ಪಕ್ಷಿ ತನ್ನ ಗೂಡಿನ ಕಡೆಗೆ ಹಾರಿ ಬರುವ ಹಾಗೆ ನನ್ನ ಆತ್ಮ ಅತ್ಯಂತ ಭರವಸೆಯೊಂದಿಗೆ ನಿನ್ನ ಕಡೆಗೆ ಹಾರಿ ಬರುತ್ತಿದೆ. ನಿನ್ನ ಶಕ್ತಿ ಸಾಮರ್ಥ್ಯಗಳ ದೃಷ್ಟಾಂತವನ್ನು ಕಾಣಲು ನಾನು ಆಶಿಸುತ್ತಿದ್ದೇನೆ. ಅದು ನನಗೋಸ್ಕರವಾಗಲಿ ನನ್ನ ಗೌರವಕ್ಕೋಸ್ಕರವಾಗಲಿ ಅಲ್ಲ. ಅದನ್ನು ನಾನು ಆಶಿಸುವುದು ಜನರು ನಿನ್ನನ್ನು ಗುರುತಿಸಲಿಕ್ಕಾಗಿ ಮತ್ತು ನಿನ್ನ ಪರಿಶುದ್ಧ ಮಾರ್ಗವನ್ನು ಅವರು ಅನುಸರಿಸಲಿಕ್ಕೋಸ್ಕರವಾಗಿದೆ. ನೀನು ಯಾರನ್ನು ಕಳುಹಿಸಿರುವೆಯೋ ಅವನನ್ನು ಸುಳ್ಳುಗಾರನೆಂದು ಹೇಳಿ ಅವರು ಸನ್ಮಾರ್ಗದಿಂದ ದೂರ ಸರಿಯದಿರಲಿ ಎಂಬುದಕ್ಕಾಗಿದೆ. ನೀನೇ ನನ್ನನ್ನು ಕಳುಹಿಸಿರುವೆ ಎಂದು ನಾನು ಸಾಕ್ಷ್ಯ ಹೇಳುತ್ತೇನೆ. ನನಗೆ ಸಹಾಯಕವಾಗಿ ದೊಡ್ಡ ದೊಡ್ಡ ದೃಷ್ಟಾಂತಗಳನ್ನು ನೀನು ತೋರಿಸಿರುವೆ. ಸೂರ್ಯಚಂದ್ರರಿಗೆ ಸಹ ನೀನು ಆಜ್ಞಾಪಿಸಿದೆ ರಮಝಾನ್ ತಿಂಗಳಲ್ಲಿ ಭವಿಷ್ಯವಾಣಿಯ ದಿನಾಂಕಗಳ ಪ್ರಕಾರ ಗ್ರಹಣ ಹೊಂದಲಿ ಎಂದು. ನಾನು ನಿನ್ನನ್ನು ಗುರುತಿಸಿರುವೆನು. ನೀನೇ ನನ್ನ ದೇವನಾಗಿರುವೆ. ಆದುದರಿಂದ ನನ್ನ ಆತ್ಮ ನಿನ್ನ ಹೆಸರು ಹೇಳಿದಾಗ ಹೇಗೆ ನೆಗೆದಾಡುತ್ತದೆ ಎಂದರೆ ಹಾಲು ಕುಡಿಯುವ ಮಗು ತಾಯಿಯನ್ನು ಕಂಡಾಗ ನೆಗೆದಾಡುವಂತೆ. ಆದರೆ ಬಹುತೇಕ ಜನರು ನನ್ನನ್ನು ಗುರುತಿಸಿಲ್ಲ ಮತ್ತು ನನ್ನನ್ನು ನಂಬಲಿಲ್ಲ.

ಮೇಲಿನ ಮಾತುಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನ ಬಗ್ಗೆ ಇದ್ದ ಪ್ರೀತಿ ಮತ್ತು ಅಲ್ಲಾಹನ ಮಹತ್ವವನ್ನು ಜನರಲ್ಲಿ ಸ್ಥಾಪಿಸಲು ಅವರಿಗಿದ್ದ ಹಂಬಲ ಪ್ರಕಟವಾಗುತ್ತದೆಯಲ್ಲದೆ ಮಾನವರನ್ನು ರಕ್ಷಿಸಲು ಅವರಿಗಿದ್ದ ಅಭಿಲಾಷೆ ಸಹ ಪ್ರಕಟವಾಗುತ್ತಿದೆ. ಜನರ ಹೃದಯಗಳಲ್ಲಿ ಅಲ್ಲಾಹನ ಬಗ್ಗೆ ಪ್ರೀತಿ ಹುಟ್ಟಬೇಕೆಂದು ಅವರಿಗೆ ಎಷ್ಟು ಬಲವಾದ ಆಗ್ರಹವಿತ್ತು ಎಂಬುದರ ಬಗ್ಗೆ ಅವರ ಈ ಕೆಳಗಿನ ಮಾತುಗಳಿಂದ ತಿಳಿಯುತ್ತದೆ. ತನಗೆ ಒಬ್ಬ ದೇವನಿದ್ದಾನೆ, ಅವನು ಪ್ರತಿಯೊಂದನ್ನು ಮಾಡಲು ಸಮರ್ಥನು ಎಂದು ಇಷ್ಟರ ತನಕ ತಿಳಿಯದೆ ಇರುವ ಮನುಷ್ಯನು ಎಷ್ಟು ದುರದೃಷ್ಟಶಾಲಿಯಾಗಿದ್ದಾನೆ. ನಮ್ಮ ಸ್ವರ್ಗ ನಮ್ಮ ದೇವನಾಗಿದ್ದಾನೆ. ನಮ್ಮ ಎಲ್ಲ ಉನ್ನತ ರಸಾನುಭೂತಿಗಳು ನಮ್ಮ ದೇವನಲ್ಲಿದೆ. ಏಕೆಂದರೆ ನಾವು ಅವನನ್ನು ನೋಡಿದ್ದೇವೆ. ಪ್ರತಿಯೊಂದು ಸೌಂದರ್ಯ ಅವನಲ್ಲಿ ಕಂಡಿದ್ದೇವೆ. ಜೀವಾರ್ಪಣೆ ಮಾಡುವುದರಿಂದ ಲಭಿಸುವುದಾಗಿದ್ದರೂ ಈ ಐಶ್ವರ್ಯವು ಗಳಿಸಲು ಅರ್ಹವಾಗಿದೆ. ತನ್ನ ಅಸ್ತಿತ್ವವನ್ನು ಕಳೆದುಕೊಂಡು ಲಭಿಸುವುದಾಗಿದ್ದರೂ ಈ ಮಾಣಿಕ್ಯ ಖರೀದಿಸಲು ಯೋಗ್ಯವಾಗಿದೆ, ಓ ಅನುಗ್ರಹವಂಚಿತರೇ, ನೀವು ಈ ಕಾರಂಜಿಯ ಕಡೆಗೆ ಓಡಿ ಬನ್ನಿರಿ. ಅದು ನಿಮಗೆ ದಾಹಶಮನ ನೀಡುವುದು. ಇದು ಜೀವದಾನ ನೀಡುವ ಕಾರಂಜಿಯಾಗಿದೆ. ಅದು ನಿಮ್ಮನ್ನು ರಕ್ಷಿಸುವುದು. ನಾನು ಏನು ಮಾಡಲಿ! ಈ ಶುಭವಾರ್ತೆಯನ್ನು ಹೃದಯಗಳಲ್ಲಿ ಹೇಗೆ ಸ್ಥಾಪಿಸಲಿ! ನಾನು ಯಾವ ತಮಟೆ ಬಾರಿಸಿ ಪೇಟೆಗಳಲ್ಲಿ ಡಂಗುರ ಸಾರಿ, ನಿಮ್ಮ ದೇವನು ಇವನು ಎಂದು ಅವರು ಆಲಿಸುವಂತೆ ಮಾಡಲಿ. ಆಲಿಸುವವರ ಕಿವಿಗಳು ತೆರೆದುಕೊಳ್ಳಲು ನಾನು ಯಾವ ಔಷಧಿಯಿಂದ ಚಿಕಿತ್ಸೆ ನಡೆಸಲಿ.

ಈ ಶಬ್ದಗಳ ತಳದಲ್ಲಿ ಎಷ್ಟು ನೋವಿದೆ. ಪ್ರತಿಯೊಂದು ಶಬ್ದದಲ್ಲಿಯೂ ನೋವಿನ ಅನೇಕ ಗರಿಗಳು ಅಡಗಿವೆ ಎಂದೇ ಹೇಳಬೇಕು. ಪ್ರತಿಯೊಂದು ಶಬ್ದದಲ್ಲಿ ಅನೇಕ ಗರಿಗಳಿವೆ. ಪ್ರತಿಯೊಂದು ಗರಿಯಲ್ಲಿ ನೋವಿದೆ. ಪ್ರತಿಯೊಬ್ಬನು ತನ್ನ ಜ್ಞಾನಕ್ಕನುಸಾರವಾಗಿ ಅದರ ಆಳಗಳಿಗೆ ಹೋಗಲು ಸಾಧ್ಯವಾಗುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ಅಲ್ಲಾಹನಿಗೆ ಸೇರಿದವರಾದರೆ, ನೀವು ದೃಢವಾಗಿ ನಂಬಿರಿ ಅಲ್ಲಾಹನು ನಿಮ್ಮವನೇ ಆಗುವನು. ನೀವು ನಿದ್ರಿಸುತ್ತಿರುವಾಗ ಅಲ್ಲಾಹನು ನಿಮಗೋಸ್ಕರ ಎಚ್ಚರದಿಂದಿರುವನು. ನೀವು ನಿಮ್ಮ ಶತ್ರುವಿನ ಬಗ್ಗೆ ತಿಳಿಯದಿರುವಾಗ ಅಲ್ಲಾಹನು ಅವನನ್ನು ನೋಡುವನು. ಶತ್ರುವಿನ ಯೋಜನೆಗಳನ್ನು ಅಲ್ಲಾಹನು ಮುರಿದು ಹಾಕುವನು. ನಿಮ್ಮ ದೇವನಲ್ಲಿ ಏನೆಲ್ಲಾ ಶಕ್ತಿ ಸಾಮರ್ಥ್ಯಗಳಿವೆ ಎಂದು ನಿಮಗೆ ಇನ್ನೂ ತಿಳಿದಿಲ್ಲ. ನಿಮಗೆ ಅವನ ಬಗ್ಗೆ ತಿಳಿದಿದ್ದರೆ ನೀವು ಲೌಕಿಕ ಆವಶ್ಯಕತೆಗಳಿಗಾಗಿ ಇಷ್ಟೊಂದು ದುಃಖಿಸುವವರಾಗುತ್ತಿರಲಿಲ್ಲ.

ನಾವು ಅಲ್ಲಾಹನೊಂದಿಗೆ ಇಂತಹ ಸಂಬಂಧ ಹೊಂದಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನನ್ನು ನಂಬುವವರು ಇಂತಹ ಮಟ್ಟವನ್ನು ಗಳಿಸಬೇಕೆಂದು ಆಶಿಸುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಿಮಗೆ ಕಣ್ಣಿರುವುದಾದರೆ ನೀವು ಕಾಣುವಿರಿ. ದೇವನು ಮಾತ್ರ ಇದ್ದಾನೆ. ಉಳಿದೆಲ್ಲವೂ ನಿಕೃಷ್ಟವಾಗಿವೆ ಎಂದು.

ತೌಹೀದ್ ಸ್ಥಾಪನೆ ಮತ್ತು ಇಸ್ಲಾಮನ್ನು ಪುನಶ್ಚೇತನಗೊಳಿಸುವ ಕೆಲಸ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವ ಮೂಲಕ ಮತ್ತು ಅವರನ್ನು ಪ್ರೀತಿಸುವ ಮೂಲಕ ದೊರಕಿತು. ಈ ಪ್ರೀತಿಯ ಪ್ರಕಟಣೆಯ ದೃಶ್ಯಗಳು ನಮಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿ ಅನೇಕ ಘಟನೆಗಳಲ್ಲಿ ದೊರಕುತ್ತವೆ. ಇಸ್ಲಾಮಿನ ವಿರೋಧಿಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು

ಅಲೈಹಿ ವಸಲ್ಲಮರ ವ್ಯಕ್ತಿತ್ವವನ್ನು ಅಪಹಾಸ್ಯ ಮಾಡುತ್ತಾ ಇದ್ದ ಬಗ್ಗೆ ತಿಳಿದಾಗ ತನ್ನ ಹೃದಯದ ನೋವನ್ನು ಪ್ರಕಟಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಆ ಜನರ ಅಪಹಾಸ್ಯಗಳು ನನ್ನ ಹೃದಯಕ್ಕೆ ಎಷ್ಟು ನೋವನ್ನುಂಟು ಮಾಡಿದೆಯೋ ಅಷ್ಟು ನೋವು ನನಗೆ ಬೇರೆ ಯಾವುದೂ ಉಂಟುಮಾಡಿಲ್ಲ. ಅವರು ನಮ್ಮ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಆಡಿದ ಮಾತುಗಳು ನನ್ನ ಹೃದಯವನ್ನು ಕಠಿಣವಾಗಿ ಗಾಯಗೊಳಿಸಿದೆ. ಅಲ್ಲಾಹನಾಣೆ! ನನ್ನ ಎಲ್ಲ ಮಕ್ಕಳು, ನನ್ನ ಮೊಮ್ಮಕ್ಕಳು, ನನ್ನ ಎಲ್ಲ ಸ್ನೇಹಿತರು, ನನ್ನ ಎಲ್ಲ ಸಹಾಯಕರು, ನನ್ನ ಕಣ್ಣೆದುರಿಗೆ ಕೊಲ್ಲಲ್ಪಟ್ಟರೂ, ನನ್ನ ಕೈಕಾಲುಗಳು ಕಡಿದು ಹಾಕಲ್ಪಟ್ಟರೂ, ನನ್ನ ಕಣ್ಣು ಕೀಳಲ್ಪಟ್ಟರೂ, ನನ್ನ ಎಲ್ಲ ಅಭಿಲಾಷೆಗಳು ತಿರಸ್ಕರಿಸಲ್ಪಟ್ಟರೂ, ನನ್ನ ಎಲ್ಲ ಸುಖಸಂತೋಷಗಳು ನಷ್ಟವಾದರೂ ಈ ಎಲ್ಲ ದುಃಖಗಳಿಗಿಂತ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಇವರು ಮಾಡುತ್ತಿರುವ ಕೊಳಕು ಆಕ್ರಮಣಗಳು ನನಗೆ ಹೆಚ್ಚು ದುಃಖಕರವಾಗಿದೆ.

ಇಂತಹ ಭಾವನೆಗಳನ್ನು ಪ್ರಕಟಿಸಬಲ್ಲವರು ಬೇರೆ ಯಾರಾದರೂ ಇದ್ದಾರೆಯೇ? ಪ್ರೀತಿ ವಾತ್ಸಲ್ಯ ಪ್ರಕಟಿಸುವವರು ಅನೇಕರಿದ್ದಾರೆ. ನಾಮೂಸೆ ರಿಸಾಲತ್ (ಸಂದೇಶವಾಕರ ಗೌರವ) ಮತ್ತು ಖತ್‌ಮೆನುಬುವ್ವತ್ ಹೆಸರಲ್ಲಿ ಹಿಂಸಾಚಾರ, ಗಲಬೆಗೊಂದಲ ಹರಡುವವರು, ಹತ್ಯೆ ಮಾಡುವವರು ಮತ್ತು ಬೆಂಕಿ ಹಚ್ಚುವವರು ಅನೇಕರಿದ್ದಾರೆ. ಆದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉನ್ನತ ಸ್ಥಾನವನ್ನು ಲೋಕದ ಎದುರಿಗೆ ಪ್ರಕಟಿಸಲು, ಇಸ್ಲಾಮ್ ಮತ್ತು ಪವಿತ್ರ ಖುರ್‌ಆನನ್ನು ಲೋಕದಲ್ಲಿ ಹರಡಲು ಈ ಜನರು ಮಾಡಿದ ಪ್ರಯತ್ನಗಳಾದರೂ ಏನು? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹೇಳಿಕೆಗಳು ಕೇವಲ ಬಾಯಿ ಮಾತಗಳಲ್ಲ. ಅವರೊಂದಿಗೆ ಸಂಬಂಧ ಹೊಂದಿರುವವರು ಮತ್ತು ಅನ್ಯರು ಸಹ ಈ ವಿಷಯದ ಬಗ್ಗೆ ಸಾಕ್ಷ್ಯ ನೀಡುತ್ತಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಅವರಿಗಿದ್ದ ಪ್ರೇಮ ಅವರ ಹೃದಯದ ಶಬ್ದವಾಗಿದೆ ಎಂದು ಅವರ ಪ್ರತಿಯೊಂದು ಕೆಲಸದಿಂದ ಸಾಬೀತಾಗುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಾಡಿದ ಕೆಲಸಗಳೆಲ್ಲವೂ ಇಸ್ಲಾಮ್ ಧರ್ಮ ಅಲ್ಲಾಹನ ಕೊನೆಯ ಧರ್ಮ, ಪರಿಪೂರ್ಣ ಧರ್ಮ ಎಂದು ಸಾಬೀತು ಗೊಳಿಸಲು, ಹಝ್ರತ್ ಮುಹಮ್ಮದ್ ಸಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಅವರಿಗಿದ್ದ ಪ್ರೀತಿಯ ಕಾರಣದಿಂದ ಅವರ ಶ್ರೇಷ್ಠತೆಯನ್ನು ಲೋಕದಲ್ಲಿ ಸ್ಥಾಪಿಸಲು, ಅವರೇ ಸರ್ವಶ್ರೇಷ್ಠರೆಂದು ಸ್ಥಾಪಿಸಲು ಮಾಡಿದುದಾಗಿತ್ತು. ಮುಹಮ್ಮದೀ ಧರ್ಮದ ಹಾಗಿರುವ ಧರ್ಮ ಬೇರೊಂದಿಲ್ಲ ಎಂದು ಲೋಕದ ಎದುರಿಗೆ ಮತ್ತು ಎಲ್ಲ ಧರ್ಮಗಳ ಎದುರಿಗೆ ಅವರು ಸ್ಪಷ್ಟಪಡಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಆಕ್ಷೇಪಿಸುವವರು, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಪ್ರೀತಿಯನ್ನು ಹೇಗೆ ಪ್ರಕಟಿಸಿದ್ದಾರೆ ಎಂಬುದನ್ನು ಒಮ್ಮೆ ಓದಬೇಕು ಮತ್ತು ಚಿಂತಿಸಬೇಕು. ಬರೇ ಆಕ್ಷೇಪಕ್ಕೋಸ್ಕರ ಆಕ್ಷೇಪಮಾಡುವುದು ಅಜ್ಞಾನದ ಚಿಹ್ನೆಯಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಬ್ಬ ನಿಷ್ಠಾವಂತ ಶಿಷ್ಯನ ರೀತಿಯಲ್ಲಿ ಒಬ್ಬ ಹಿತೈಷಿ ಸೇವಕನ ರೂಪದಲ್ಲಿ ಯಾವಾಗಲೂ ಹೀಗೆ ಹೇಳುತ್ತಿದ್ದರು: ನನಗೆ ದೊರೆತ ಎಲ್ಲವೂ ನನ್ನ ಯಜಮಾನರಾದ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾರಣದಿಂದ, ಅವರನ್ನು ಅನುಸರಿಸುವ ಮೂಲಕ ನನಗೆ ದೊರೆತವುಗಳಾಗಿವೆ ಎಂದು.

ಅವರು ಇನ್ನೊಂದು ಸ್ಥಳದಲ್ಲಿ ಹೇಳುತ್ತಾರೆ: ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಮ್ಮತ್‌ಗೆ ಸೇರದವನಾಗಿರುತ್ತಿದ್ದರೆ, ನಾನು ಅವರನ್ನು ಅನುಸರಿಸದೆ ಇರುತ್ತಿದ್ದರೆ, ನನ್ನ ಅನುಷ್ಠಾನ ಕರ್ಮಗಳು ಲೋಕದ ಎಲ್ಲ ಪರ್ವತಗಳಷ್ಟು ಆಗಿದ್ದರೂ ನನಗೆ ಎಂದೂ ದೇವವಾಣಿ ಗಳಿಸುವ ಭಾಗ್ಯ ಲಭಿಸುತ್ತಿರಲಿಲ್ಲ.

ಮೇಲೆ ವಿವರಿಸಿದ ಮಾತುಗಳನ್ನು ಆಲಿಸಿದ ನಂತರ ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಕ್ಷೇಪಿಸುವವರ ಬಗ್ಗೆ ಝಾಲಿಮ್ (ಅಕ್ರಮಿ) ಜಾಹಿಲ್ (ಅಜ್ಞಾನಿ) ಗಲಭೆಗೊಂದಲವೆಬ್ಬಿಸುವವ ಎಂದೇ ಹೇಳಲು ಸಾಧ್ಯ. ಅಂತಹ ಜನರ ವಿಷಯ ಈಗ ಅಲ್ಲಾಹನ ಕೈಗಳಲ್ಲಿವೆ. ಅವರು ದೊಡ್ಡ ದೊಡ್ಡ ಆಲಿಮರೆಂದು ಹೇಳಿಕೊಂಡು ತಿರುಗಾಡುತ್ತಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿಯೋಜಿತರಾದುದರ ಉದ್ದೇಶ ತೌಹೀದ್ ಸ್ಥಾಪನೆ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉನ್ನತ ಪದವಿಯನ್ನು ಸ್ಪಷ್ಟಪಡಿಸಿ ಲೋಕವನ್ನು ಅವರ ಪತಾಕೆಯ ಕೆಳಗೆ ತರುವುದು ಮಾತ್ರವಲ್ಲ ಅದರೊಂದಿಗೆ ಹುಖೂಖುಲ್ ಇಬಾದ್ (ಸೃಷ್ಟಿಗಳ ಹಕ್ಕುಗಳು) ಈಡೇರಿಸುವುದು ಮತ್ತು ಅಲ್ಲಾಹನ ಸೃಷ್ಟಿಗಳ ಬಗ್ಗೆ ವಾತ್ಸಲ್ಯ ಹುಟ್ಟಿಸುವುದು ಮತ್ತು ಅದರ ಪ್ರಕಾರ ಕಾರ್ಯ ಪ್ರವೃತ್ತರಾಗುವಂತೆ ಮಾಡುವುದು ಸೇರಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬೈಅತ್ ಶರತ್ತುಗಳಲ್ಲಿ ಸಹ ಇದನ್ನು ಸೇರಿಸಿದರು. ಅದರ ನಾಲ್ಕನೆಯ ಶರತ್ತು ಈ ರೀತಿಯಿದೆ. ಭಾವೋದ್ರೇಕಕ್ಕೆ ಗುರಿಯಾಗಿ ದೇವ ಸೃಷ್ಟಿಗಳಲ್ಲಿ ಯಾರಿಗೂ –ವಿಶೇಷವಾಗಿ ಮುಸ್ಲಿಮರಿಗೆ– ನಾಲಗೆಯಿಂದಾಗಲಿ ಕೈಯಿಂದಾಗಲಿ, ಬೇರಾವುದೇ ರೀತಿಯಲ್ಲಾಗಲಿ, ಯಾವುದೇ ಕಷ್ಟವನ್ನುಂಟು ಮಾಡಲಾರೆನು. ಒಂಬತ್ತನೆಯ ಶರತ್ತು ಹೀಗೆ: ಅಲ್ಲಾಹನ ಎಲ್ಲ ಸೃಷ್ಟಿಗಳೊಂದಿಗೆ ಪ್ರಮಾಣಿಕವಾದ ಸಹಾನುಭೂತಿಯನ್ನು ತೋರಿಸಬೇಕಲ್ಲದೆ ದೇವನು ನೀಡಿದ ಸಾಮರ್ಥ್ಯಗಳ ಮತ್ತು ಅನುಗ್ರಹಗಳ ಮೂಲಕ ಮಾನವರಿಗೆ ಉಪಕಾರಗಳನ್ನು ಮಾಡುತ್ತಲಿರಬೇಕು.

ಇದರ ಪ್ರಕಾರ ಇಸ್ಲಾಮೀ ಉಪದೇಶಗಳನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಧರ್ಮದಲ್ಲಿ ಎರಡೇ ಭಾಗಗಳಿವೆ. ಒಂದನೆಯದು, ಅಲ್ಲಾಹನನ್ನು ಪ್ರೀತಿಸುವುದು. ಎರಡನೆಯದು, ಮಾನವರನ್ನು ಪ್ರೀತಿಸುವುದು. ಹೇಗೆ

ಪ್ರೀತಿಸಬೇಕೆಂದರೆ ಅವರ ಕಷ್ಟವನ್ನು ತನ್ನ ಕಷ್ಟವೆಂದು ಭಾವಿಸಬೇಕು. ಅವರಿಗೋಸ್ಕರ ಪ್ರಾರ್ಥಿಸಬೇಕು. ಒಂದು ಸ್ಥಳದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನು ಎಲ್ಲ ಮುಸ್ಲಿಮರಿಗೆ, ಕ್ರೈಸ್ತರಿಗೆ, ಹಿಂದುಗಳಿಗೆ, ಆರ್ಯಾ ಸಮಾಜದವರಿಗೆ ಸ್ಪಷ್ಟಪಡಿಸಲು ಬಯಸುತ್ತೇನೆ: ಲೋಕದಲ್ಲಿ ನನ್ನ ಶತ್ರುವಾಗಿ ಯಾರೂ ಇಲ್ಲ. ನಾನು ಎಲ್ಲ ಮಾನವರೊಂದಿಗೆ ಹೇಗೆ ಪ್ರೀತಿಯನ್ನು ಹೊಂದಿದ್ದೇನೆಂದರೆ ವಾತ್ಸಲ್ಯಮಯಿಯಾದ ಓರ್ವ ತಾಯಿ ತನ್ನ ಮಕ್ಕಳೊಂದಿಗೆ ಪ್ರೀತಿ ಹೊಂದಿರುವ ಹಾಗೆ ಮಾತ್ರವಲ್ಲ, ಅದಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ. ಸತ್ಯದ ಕೊಲೆ ಮಾಡುತ್ತಿರುವ ಮಿಥ್ಯ ನಂಬಿಕೆಗಳಿಗೆ ನಾನು ಶತ್ರುವಾಗಿದ್ದೇನೆ. ಮನುಷ್ಯನ ಬಗ್ಗೆ ಸಹಾನುಭೂತಿ ಪ್ರಕಟಿಸುವುದು ನನ್ನ ಕಡ್ಡಾಯ ಕರ್ತವ್ಯವಾಗಿದೆ. ಸುಳ್ಳು, ಬಹುದೇವಾರಾಧನೆ(ಶಿರ್ಕ್), ದೌರ್ಜನ್ಯ, ದುರಾಚಾರ, ಅನ್ಯಾಯ, ದುರ್ನಡತೆ ಇವುಗಳ ಬಗ್ಗೆ ಜಿಗುಪ್ಸೆ ನನ್ನ ತತ್ವವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈರೀತಿ ಬರೆದುದು ಕೇವಲ ಬರೆಯಲಿಕ್ಕಾಗಿ ಅಥವಾ ವಾದಿಸಲಿಕ್ಕಾಗಿ ಆಗಿರಲಿಲ್ಲ. ಅವರಿಗೆ ಮಾನವರೊಂದಿಗೆ ಎಲ್ಲರಿಗಿಂತ ಹೆಚ್ಚು ಪ್ರೀತಿ ಇದೆ ಎಂದು ಬರೆದುದಕ್ಕೆ ಕೃತ್ಯ ರೂಪದ ಸಾಕ್ಷ್ಯ ಅವರ ಜೀವಿತದಲ್ಲಿ ಕಾಣಿಸುತ್ತದೆ. ಪ್ಲೇಗ್ ರೋಗದ ಶಿಕ್ಷೆಯಿಂದ ಮಾನವರನ್ನು ರಕ್ಷಿಸಬೇಕೆಂದು ಅವರು ಬೇಡಿಕೊಳ್ಳುತ್ತಿದ್ದರು. ಅವರು ಹೀಗೆ ಪ್ರಾರ್ಥಿಸುತ್ತಿದ್ದರು. ಓ ನನ್ನ ಇಲಾಹ್, ಈ ಜನರು ಪ್ಲೇಗ್ ರೋಗದಿಂದ ನಾಶವಾದರೆ, ಮತ್ತೆ ನಿನ್ನನ್ನು ಆರಾಧಿಸುವವರಾಗಿ ಯಾರು ಬಾಕಿ ಉಳಿಯುತ್ತಾರೆ.

ವಾಸ್ತವಿಕವಾಗಿ ಪ್ಲೇಗ್ ರೋಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಗೆ ಸಾಕ್ಷಿಯಾಗಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಎಷ್ಟು ನೋವಿನೊಂದಿಗೆ ಹೀಗೆ ಪ್ರಾರ್ಥಿಸುತ್ತಿದ್ದರೆಂದರೆ ಅದನ್ನು ಆಲಿಸಿದವರು ಗಾಬರಿಗೊಳ್ಳುತ್ತಿದ್ದರು. ಆದುದರಿಂದ ಯೋಚಿಸಿರಿ. ಒಂದು ಭವಿಷ್ಯವಾಣಿ ಪ್ರಕಾರ ಶತ್ರುಗಳ ಮೇಲೆ ಪ್ಲೇಗಿನ ಶಿಕ್ಷೆ ಬಂದೆರಗಿತ್ತು. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅದನ್ನು ದೂರಸರಿಸಬೇಕೆಂದು ಅಲ್ಲಾಹನನ್ನು ಪ್ರಾರ್ಥಿಸುತ್ತಿದ್ದರು.

ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಅತ್ಯಂತ ಹೆಚ್ಚಿನ ಮಟ್ಟದಲ್ಲಿ ವಿರೋಧಿಸುತ್ತಿದ್ದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿರುದ್ಧ ಕುಫ್ರ್ ಫತ್ವ ಹೊರಡಿಸಿದರು. ದಜ್ಜಾಲ್ ಎಂದೂ ಝಾಲ್ಲ್ ಎಂದೂ ಕರೆದರು (ನಊದುಬಿಲ್ಲಾಹ್). ದೇಶದಾದ್ಯಂತ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ದ್ವೇಷದ ಅಗ್ನಿ ಪ್ರಜ್ವಲಗೊಳಿಸಿದ್ದರು. ಆದರೆ ಒಂದು ಮೊಕದ್ದಮೆಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಕೀಲರು ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿಯ ಕುಟುಂಬದ ಬಗ್ಗೆ ಅಪಮಾನಕರವಾದ ಪ್ರಶ್ನೆ ಕೇಳಲು ಬಯಸಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅದನ್ನು ಬಲವಾಗಿ ತಡೆದರು. ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಕೀಲ್ ಫಝುಲ್‌ದೀನ್ ಸಾಹೇಬ್ ಅಹ್ಮದಿಯಾಗಿರಲಿಲ್ಲ. ಅವರು ಹೇಳುತ್ತಿದ್ದರು: ಮಿರ್ಝಾ ಸಾಹೇಬರು ಓರ್ವ ಅದ್ಭುತ ಮನುಷ್ಯರಾಗಿದ್ದಾರೆ. ಅವರು ಅದ್ಭುತ ನೈತಿಕ ಗುಣವುಳ್ಳವರಾಗಿದ್ದಾರೆ. ಒಬ್ಬ ವ್ಯಕ್ತಿ ಅವರ ಗೌರವ ಮಾತ್ರವಲ್ಲ ಅವರ ಜೀವಕ್ಕೆ ಸಹ ಆಕ್ರಮಣ ಮಾಡುತ್ತಿರುವಾಗ ಅಂತಹ ವ್ಯಕ್ತಿ ನೀಡಿದ ಸಾಕ್ಷ್ಯವನ್ನು ಬಲಗುಂದಿಸಲಿಕ್ಕಾಗಿ ಅವರ ಕುಟುಂಬದ ಕುರಿತು ಕೆಲವು ಪ್ರಶ್ನೆ ಕೇಳಲು ನಾನು ಬಯಸಿದಾಗ ಮಿರ್ಝಾ ಸಾಹೇಬರು ಕೂಡಲೆ ಅದನ್ನು ತಡೆದರು ಮತ್ತು ಹೇಳಿದರು, ಇಂತಹ ಪ್ರಶ್ನೆ ಕೇಳಲು ನಾನು ಅನುಮತಿ ನೀಡುವುದಿಲ್ಲ.

ಇದು ಒಂದು ಉದಾಹರಣೆ ಮಾತ್ರವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನೋದ್ದೇಶವನ್ನು ಪ್ರತಿರೋಧಿಸಲು ಅನೇಕ ಮುಸ್ಲಿಮ್ ಮತಪಂಡಿತರು ಪ್ರಯತ್ನ ಮಾಡಿದರು. ಅಸಂಖ್ಯಾತ ಆಲಿಮ್ ನಾಮಧೇಯರು ಅವರನ್ನು ವಿರೋಧಿಸಿದರು. ಕುಫ್ರ್ ಫತ್ವ ಹೊರಡಿಸಿದರು. ಈಗ ಸಹ ಈ ರೀತಿ ಫತ್ವ ಹೊರಡಿಸುತ್ತಾ ಇದ್ದಾರೆ. ಇದರ ಪರಿಣಾಮವಾಗಿ ವಿವಿಧ ಮುಸ್ಲಿಮ್ ದೇಶಗಳಲ್ಲಿ ನಮ್ಮನ್ನು ವಿರೋಧಿಸುತ್ತಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮಗೆ ನೀಡಿದ ಉಪದೇಶಗಳ ಕಾರಣದಿಂದ ನಾವು ಈ ವಿರೋಧಿಗಳಿಗೆ ಉತ್ತರ ನೀಡುವಾಗ ನಾವು ನೈತಿಕ ಗುಣದ ಮಟ್ಟವನ್ನು ತ್ಯಜಿಸುವುದಿಲ್ಲ. ನಾವು ನಿಯಮವನ್ನು ನಮ್ಮ ಕೈಗೆ ಎತ್ತಿಕೊಳ್ಳುವುದಿಲ್ಲ. ಈ ಜನರಿಗೆ ಮನವರಿಕೆ ಆಗಿದ್ದರೆ ಎಷ್ಟು ಚೆನ್ನಾಗಿತ್ತು. ಈ ಕಾಲಘಟ್ಟದ ಹಕಮ್, ಅದಲ್, ಮಸೀಹ್ ಮತ್ತು ಮಹ್‌ದೀ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್ ಆಗಿದ್ದಾರೆ ಎಂದು. ಇಸ್ಲಾಮಿನ ಪ್ರಚಾರ ಮತ್ತು ತೌಹೀದಿನ ಸ್ಥಾಪನೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಾಸ್ತವಿಕ ರಾಜ್ಯಭಾರ ಭೂಮಿಯ ಮೇಲೆ ಅಲ್ಲ ಹೃದಯಗಳ ಮೇಲೆ ಸ್ಥಾಪಿಸಲ್ಪಡಬೇಕಾದುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕವೇ ಆಗಿದೆ. ಅವರ ಜಮಾಅತ್ ಮೂಲಕವೇ ಸ್ಥಾಪಿಸಲ್ಪಡಬೇಕಾಗಿದೆ. ಯಾವುದೇ ಖಡ್ಗ ಅಥವಾ ಬಂದೂಕು, ಶಕ್ತಿ ಅಥವಾ ಭಯೋತ್ಪಾದನೆ ಹರಡುವ ಮೂಲಕವಲ್ಲ. ಇಸ್ಲಾಮಿನ ಹೆಸರಲ್ಲಿ ದೌರ್ಜನ್ಯ ಪೀಡಿತರನ್ನು ಕೊಲ್ಲುವ ಮೂಲಕವಲ್ಲ.

ಅಹ್ಮದಿಯರಾದ ನಮ್ಮ ಕೆಲಸವೇನೆಂದರೆ ನಾನು ಹಿಂದೆ ಸಹ ಹೇಳಿದ್ದೇನೆ, ಬಹಳ ಸಾರಿ ಹೇಳಿದ್ದೇನೆ, ಇಸ್ಲಾಮಿನ ಸೌಂದರ್ಯವನ್ನು ಲೋಕದ ಮುಂದೆ ತೋರಿಸಬೇಕು. ಅಹ್ಮದಿಯ್ಯತ್ತಿನ ವಿರೋಧಿಗಳ ಬಗ್ಗೆ ಹೇಳುವುದಾದರೆ, ಅಹ್ಮದಿಯ್ಯತ್‌ಗೆ ಯಾವ ಹಾನಿ ಉಂಟುಮಾಡಲಿಕ್ಕೂ ಅವರಿಂದ ಸಾಧ್ಯವಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಲ್ಲಾಹನು ಕಳುಹಿಸಿದ್ದಾನೆ. ಅವರನ್ನು ಕಳುಹಿಸಿರುವುದು ಅವರು ಜಯಶಾಲಿಯಾಗಲಿಕ್ಕಾಗಿದೆ. ಅವರ ಮೂಲಕವೇ ಈಗ ಇಸ್ಲಾಮ್ ಹರಡಬೇಕಾಗಿದೆ. ಹಝ್ರತ್ ಮಸೀಹ್

ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನೊಂದು ಬೀಜ ಬಿತ್ತಲು ಆಗಮಿಸಿದ್ದೇನೆ. ನನ್ನ ಕೈಯಿಂದ ಆ ಬೀಜ ಬಿತ್ತಲ್ಪಟ್ಟಿದೆ. ಇನ್ನು ಅದು ಮೊಳಕೆಯೊಡೆದು ಬೆಳೆಯುವುದು. ಅದರ ಬೆಳವಣಿಗೆಯನ್ನು ತಡೆಯಲು ಯಾರಿಗೂ ಸಾಧ್ಯವಾಗದು.

ಅಲ್ಲಾಹನ ಮಸೀಹರಿಂದ ಬಿತ್ತಲ್ಪಟ್ಟ ಈ ಬೀಜ ಮರವಾಗಿ ಫಲ ಪುಷ್ಪಗಳನ್ನು ನೀಡುತ್ತಾ ಇದೆ. ನಾವು ಅದರ ಹಚ್ಚ ಹಸುರಾದ ಕೊಂಬೆಗಳಾಗಬೇಕಾದರೆ, ನಾವು ಮಾಡಬೇಕಾದುದು ಅಲ್ಲಾಹನೊಂದಿಗೆ ಪ್ರೀತಿ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಪ್ರೇಮ, ಮಾನವರೊಂದಿಗೆ ಅನುಕಂಪವನ್ನು ತೋರಿಸಬೇಕಾಗಿದೆ. ಆ ಪ್ರೀತಿಯನ್ನು ನಮ್ಮ ಪ್ರತಿಯೊಂದು ಕೆಲಸ ಪ್ರಕಟಿಸುವಂತೆ ಆಗಬೇಕು. ಅಲ್ಲಾಹನು ನಮಗೆ ಹಾಗೆ ಮಾಡುವ ಭಾಗ್ಯ ನೀಡಲಿ – ಆಮೀನ್.

——————*****——————

***Friday Sermon delivered by Hadrath Khaleefatul Masih Al Khamis**(atba)*

*At, Masjid Baithul Futhuh, London on 24-03-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon